# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. 386/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶಿವಶಂಕರ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಮಹದೇವು | | **22.07.2025** |
| **ವಯಸ್ಸು** | ಃ 45 ವರ್ಷ | | |
| **ವೃತ್ತಿ** | ಃ ಚಾಲಕ | **ಪ್ರಾ.ಸಾ.** | ಃ 7 |
| **ವಾಸಸ್ಥಳ** | ಃ ನಂಜನಗೂಡು | **ಚಾ.ಸಾ.** | ಃ 3 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆ ಈಗಾಗಲೇ ನಿಪಿ-*8* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*8(ಸಿ)* ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇರತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ಪೊಲೀಸ್ ನೊಟೀಸ್ ಇದ್ದು ಅದನ್ನು ಈಗಾಗಲೇ ನಿಪಿ-*9* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*9(ಬಿ)* ಎಂದು ಗುರುತಿಸಲಾಯಿತು. *2019* ನೇ ಇಸವಿಯಲ್ಲಿ ನಾನು ನಂಜನಗೂಡಿನಿಂದ ಮೈಸೂರಿಗೆ ಬರುತ್ತಿರುವಾಗ ಬಿಡಿಓ ಆಫೀಸ್ ಹತ್ತಿರ ಪೊಲೀಸರು ಕೈ ತೋರಿಸಿದರು ಆದ್ದರಿಂದ ನಾನು ಮೋಟಾರು ಸೈಕಲ್ ನಿಲ್ಲಿಸಿದ್ದೆ. ಆಗ ಪೊಲೀಸರು ಇಲ್ಲಿ ಅಪಘಾತ ಆಗಿತ್ತು ಮಹಜರ್ ಮಾಡಬೇಕಾಗಿರುತ್ತದೆ ಒಂದು ಸಹಿ ಮಾಡು ಎಂದು ಹೇಳಿದ್ದರು ನಾನು ಸಹಿ ಮಾಡಿದ್ದೆ. ನನಗೆ

ನಿಪಿ-8 ಮತ್ತು 9 ರಲ್ಲಿ ಏನು ಬರೆದಿತ್ತು ಎಂದು ಗೊತ್ತಿರುವುದಿಲ್ಲ ಕೇವಲ ಸಹಿ ತೆಗೆದುಕೊಂಡಿದ್ದರು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

ದಿನಾಂಕ 02.11.202019 ರಂದು ಪೊಲೀಸರು ಅಪೋಲೋ ಸರ್ಕಲ್ ಬಳಿ ಆರ್.ಎಂ.ಸಿ. ಮುಂಭಾಗ ಮೈಸೂರು ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ ಪ್ರಾಸಾ-6 ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಮಂಜು ರವರ ಸಮಕ್ಷಮ ಈಗ ಓದಿ ಹೇಳಿದ ನಿಪಿ-9 ರಂತೆ ನೋಟೀಸ್ ಅನ್ನು ಕೊಟ್ಟು ನಿಪಿ-8 ರಂತೆ ಸ್ಥಳ ಪಂಚನಾಮೆಯನ್ನು ಮಾಡಿ ಓದಿ ಹೇಳಿ ನನ್ನ ಸಹಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*